ಆಡುಮಾತಿನಲ್ಲಿರುವ ಚಿತ್ರಕಥಾಪಟ

# ಜಾತ್ರೆ




ನಿರೂಪಣೆ: ಶಿಹೊಂ, ಧ್ವನಿ ಬಳಗ

ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ


**ಶಿಕ್ಷಕರಲ್ಲಿ ನಿವೇದನೆ:**
ಈ ವಿಶಿಷ್ಟ ಚಿತ್ರಕಥಾಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಒಮ್ಮೆ ಓದಿ ಹೇಳಿ. ಹೇಳುತ್ತಲೇ ಕಥೆ ಆಧರಿಸಿ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ನವೆಂಬರ್ – ಡಿಸೆಂಬರ್ ೨೦೨೪–೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors



ಒಂದಿಬ್ರು ಗೆಳೆಯರು ಇರುತ್ತಾರೆ. ಅವರ ವಯಸ್ಸು ಸುಮಾರು ಹತ್ತು ಹನ್ನೆರಡು ವರ್ಷ ಅಂತ ಇಟ್ಟುಕೋಬಹುದು. ಬಹಳ ಜಾಣರಿರುತ್ತಾರೆ. ಒಂದು ಸಲ, ಅವರ ಊರಿನ ಪಕ್ಕ ಒಂದು ದೊಡ್ಡ ಜಾತ್ರೆ ನಡೆಯುತ್ತಾ ಇರುತ್ತೆ. ಅಲ್ಲಿಗೆ ಇಬ್ಬರು ಸೇರಿ ಹೋಗಬೇಕು ಅಂದುಕೊಳ್ಳುತ್ತಾರೆ.


ಅವಾಗ ಅವರ ಮನೆನಲ್ಲಿ ಅವರ ಅಮ್ಮ ಅವರಿಗೆ ತಿನ್ನೋದಕ್ಕೆ ಅಂತ ಸ್ವಲ್ಪ ಚಪಾತಿ ಕಟ್ಟಿಕೊಡುತ್ತಾರೆ.


ಆ ಬುತ್ತಿ ಡಬ್ಬಿಯನ್ನು ತಗೊಂಡು ಜಾತ್ರೆಗೆ ಹೋಗುತ್ತಾರೆ.
ಅವರಿಗೆ ನಡೆದುಕೊಂಡು ಹೋಗುವುದೇ ಬಹಳ ಇಷ್ಟ.
ಹತ್ರ ಇರತ್ತಲ್ವಾ ಊರು–ಪಕ್ಕದ ಊರು, ಅದಕ್ಕೆ ಅವರು ನಡೆದುಕೊಂಡು ಹೋಗುತ್ತಾರೆ.




ಒಂದು ಅರ್ಧ ಗಂಟೆ ಅಷ್ಟೋತ್ತು ನಡೆದ ತಕ್ಷಣ, ಅಲ್ಲಿ ಆ ಊರ ಜಾತ್ರೆ ಬರುತ್ತೆ. ಅಲ್ಲೆಲ್ಲ ತಿರುಗಾಡುತ್ತಾರೆ. ಜಾತ್ರೆಯಲ್ಲಿ ಬೇರೆ ಬೇರೆ ಬೇರೆ ಬೇರೆ ರೀತಿಯ ಗೊಂಬೆಯ ಅಂಗಡಿಗಳು ಇರುತ್ತವೆ. ತಿಂಡಿ–ತಿನಿಸುಗಳ ಅಂಗಡಿಗಳು ಇರುತ್ತವೆ. ಆಮೇಲೆ ಸಣ್ಣ–ಪುಟ್ಟ ಸಣ್ಣ–ಪುಟ್ಟ ಸರ್ಕಸ್ ತರದ್ದು ಏನೇನೋ ನಡೆಯುತ್ತಾ ಇರುತ್ತೆ. ಅದನ್ನೆಲ್ಲ ನೋಡ್ತಾ ನೋಡ್ತಾ ಬಾಳಾ ಖುಷಿಯಾಗುತ್ತೆ.




ಹೀಗೆ ಒಂದು ಗಂಟೆಗಟ್ಲೆ ತಿರುಗಿದಾಗ ಅವರಿಗೆ ಹಸಿವೆಯಾಗುತ್ತೆ.
ಎಲ್ಲಿ ತಿನ್ನಬೇಕು ತಾವು ಕಟ್ಟಿಗೊಂಡ ಬಂದ ಬುತ್ತಿನ ಅಂತ ಆಲೋಚನೆ ಮಾಡಿದಾಗ,
ಅಲ್ಲೇ ಒಂದು ಸಣ್ಣ ಹೋಟಲ್ ಕಾಣುತ್ತೆ.

ಅದರೊಳಗೆ ಹೋಗುತ್ತಾರೆ. ಕುಳಿತ್ಕೊಳ್ಳುತ್ತಾರೆ ಒಳಗಡೆ.
ಅಲ್ಲಿ ಮಾಣಿ ಬರತ್ತಾನೆ.
“ಏನ್ ಬೇಕು ನಿಮ್ಗೆ?” ಅಂತ ಕೇಳತಾನೆ.
ಇವರು ಹೇಳುತ್ತಾರೆ,“ಏನೂ ಬೇಡ.” ಅಂತ.
“ಸರಿ.” ಅಂತ ಮಾಣಿ ಸ್ವಲ್ಪ ಆ ಕಡೆ ಹೋಗ್ತಾನೆ.
ಇವ್ರು ತಾವಿಬ್ಬರೂ ಮನೆಯಿಂದ ಬುತ್ತಿ ತಂದಿದ್ರಲ್ಲ, ಅದನ್ನ
ಬಿಚ್ಚಿ ತಿನ್ನೋಕೆ ಶುರು ಮಾಡ್ತಾರೆ.



ಆವಾಗ ಮಾಣಿ ಮತ್ತೆ ಬರ್ತಾನೆ. “ಏ ನೋಡ್ರೋ, ಹಂಗೆಲ್ಲ ನಿಮ್ ನಿಮ್ ಊಟ ನೀವೇ ತಿನ್ನೋ ಹಂಗಿಲ್ಲ.
ಇದು ಈ ಹೋಟಲ್ಲಿನ ಕಾನೂನು ಕಾಯ್ದೆ ಗೊತ್ತಾ?” ಅಂತ ಹೇಳ್ತಾನೆ.



"ಸರಿಯಪ, ಹಂಗಿದ್ರೆ ನಮ್ ನಮ್ ಮನೆಯಿಂದ ತಂದ ಊಟನಾ ನಾವು ಮಾಡದಿಲ್ಲ." ಅಂತ ಹೇಳ್ಬಿಟ್ಟು, ಇಬ್ರು ಗೆಳೆಯರು ತಮ್ಮ ಆ ಬುತ್ತಿ ಡಬ್ಬಿಗಳನ್ನ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಅದಲಿ-ಬದಲಿ ಮಾಡಿಕೊಂಡುಬಿಡುತ್ತಾರೆ. ಮಾಡಿಕೊಂಡುಬಿಟ್ಟು ಮಾಣಿಗೆ ಕೇಳ್ತಾರೆ,"ಆಯ್ತನಪ್ಪ, ಈಗ ನೋಡು ನೀವು ಹೇಳಿದಂಗೆ ಕೇಳ್ತಾ ಇದಿವಿ ತಾನೆ, ನಾವು ನಮ್ ನಮ್ ಮನೆಯಿಂದ ತಂದ ತಿಂಡಿನ, ಊಟಾನ ಮಾಡ್ತಾ ಇಲ್ಲ. ಬೇರೆ ಬೇರೆ ಮನೆಯಿಂದ ತಂದದ್ದಾಯ್ತು ಈಗ. "ಈಗ ಹೋಗ್." ಅಂತ ಹೇಳಿದಾಗ, ಒಂದು ಕ್ಷಣ ಮಾಣಿಗೆ ಪೆಚ್ಚಾಗಿಬಿಡುತ್ತೆ. ನಗೀನೂ ಬರುತ್ತೆ. ಆಯ್ತು ಬಿಡು. 'ಇವ್ರು ಬಹಳ ಜಾಣ ಚಿಕ್ಕ ಮಕ್ಕಳಿದ್ದಾರೆ. ಇದೊಂದು ಸಲ ತಿನ್ಕೊಂಡು ಹೋಗ್ಲಿ.' ಅಂತ ತನ್ನ ಕೆಲಸಕ್ಕೆ ತಾನು ಹೋಗಿಬಿಡ್ತಾನೆ. *

'ಜಾತ್ರೆ' ಕಥೆಯ ವಾಚನದ ವಿಡಿಯೋ ನೋಡಲು ಕೆಳಗಿರುವ QR ಕೋಡನ್ನು ಸ್ಕ್ಯಾನ್ ಮಾಡಿ.


ಸಂಪರ್ಕ ಮಾಹಿತಿ

ಧ್ವನಿ

ಶೈಕ್ಷಣಿಕ ಸಂಪನ್ಮೂಲ ಕೇಂದ್ರ

# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ

ಶಿವಗಿರಿ, ಧಾರವಾಡ-೫೮೦೦೦೭

ಮೊ. ೯೪೮ ೬೬೬ ೧೦೫೫

dhwanitrust@gmail.com

www.dhwanitrust.org



ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.